ಜಿಲ್ಲಾಧಿಕಾರಿಗಳ ಕಾರ್ಯಾಲಯ

ಜಿಲ್ಲಾ ನಗರಾಭಿವೃದ್ಧಿ ಕೋಶ, ಮೈಸೂರು ಜಿಲ್ಲೆ, ಮೈಸೂರು.
ದೂರವಾಣಿ ಸಂ: 0821-2424070. E. mail: dudc_mys@yahoo.co.in

ಸಂ.: ಮುನಿಸಿ(1)ಸಿಬ್ಬಂದಿ/ಇ-2909373/2026-27 ದಿನಾಂಕ: 21.09.2026

ಅಧಿಸೂಚನೆ

ವಿಷಯ: ಹೂಟಗಳ್ಳಿ ನಗರಸಭೆಯಲ್ಲಿ ಸೃಜಿಸಿರುವ ಸಂಖ್ಯಾತಿರಿಕ್ತ (Supernumerary) ಪೌರಕಾರ್ಮಿಕ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ನಅಇ 176 ಜಿಇಎಲ್ 2022 (ಭಾ-2) (ಇ), ದಿ:09.03.2023 ಮತ್ತು 29.03.2023.

2. ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ನಡವಳಿ ಆದೇಶ ಸಂಖ್ಯೆ: 1971724/DMA/EST2/GRPD/54/2025, ದಿ: 13.01.2026.

ಮೈಸೂರು ಜಿಲ್ಲೆಯ ಹೂಟಗಳ್ಳಿ ನಗರಸಭೆಯಲ್ಲಿ ಸೃಜಿಸಿರುವ ಸಂಖ್ಯಾತಿರಿಕ್ತ (Supernumerary) 03 ಪೌರಕಾರ್ಮಿಕ ಹುದ್ದೆಗಳನ್ನು ಭರ್ತಿ ಮಾಡಲು ಉಲ್ಲೇಖ(1) ಮತ್ತು (2)ರ ಆದೇಶಗಳಂತೆ ಮೈಸೂರು ಜಿಲ್ಲೆಯ ಹೂಟಗಳ್ಳಿ ನಗರಸಭೆಯಲ್ಲಿ ಪ್ರಸ್ತುತ ನೇರ ಪಾವತಿ/ ಕ್ಷೇಮಾಭಿವೃದ್ಧಿ/ ದಿನಗೂಲಿ ಆಧಾರದ ಮೇಲೆ ಕನಿಷ್ಠ 02 ವರ್ಷಗಳಿಗೆ ಕಡಿಮೆ ಇಲ್ಲದಂತೆ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ಪೌರ ಕಾರ್ಮಿಕರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ. ಹೂಟಗಳ್ಳಿ ನಗರಸಭೆ ಕಚೇರಿಯ ನಾಮಫಲಕದಲ್ಲಿ ಅಧಿಸೂಚನೆಯನ್ನು ಪ್ರಚುರಪಡಿಸಲಾಗಿದ್ದು ಹೆಚ್ಚಿನ ಮಾಹಿತಿಯನ್ನು ಪೌರಾಯುಕ್ತರು ನಗರಸಭೆ ಹೂಟಗಳ್ಳಿ ರವರಿಂದ ಪಡೆದುಕೊಂಡು ಅರ್ಜಿಯನ್ನು **ದಿನಾಂಕ 22.10.2026ರೊಳಗೆ** ಪೌರಾಯುಕ್ತರು ನಗರಸಭೆ ಹೂಟಗಳ್ಳಿ ರವರ ಕಚೇರಿಗೆ ಸಲ್ಲಿಸಬಹುದಾಗಿರುತ್ತದೆ.

ಸಹಿ/- ಅಧ್ಯಕ್ಷರು
ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ
ಹಾಗೂ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ.

DIPR/MYS/807/SA/2026-27